# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಬಿ.ಆರ್. ಧರ್ಮೇಂದ್ರ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಈದು ಗ್ರಾ.ಪಂ., ಕಾರ್ಕಳ ತಾಲ್ಲೂಕು, ಉಡುಪಿಜಿಲ್ಲೆ ಇವರು ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: D.O.NO.Compt/Uplok/MYS/2248/2014/PP Dated: 12-04-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ:03–04–2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ದೂರುದಾರರಾದ ಶ್ರೀ ವಿಜಯ್ ಕುಮಾರ್ ಎನ್. ರವರು ಈದು ಗ್ರಾಮದ ಶ್ರೀಮತಿ ಸುಂದರಿ ಎಂ. ಬಂಗೇರ ಇವರು ತಮ್ಮ ಸ್ವಂತ ಸ್ಥಳವಾದ ಸರ್ವೆ ನಂ.361/2ಬಿ ಯಲ್ಲಿ ಮನೆ ಕಟ್ಟಲು ಪಂಚಾಯತಿ ವತಿಯಿಂದ ಪರವಾನಿಗೆ ಪಡೆದಿದ್ದು, ಸದರಿ ಜಾಗದಲ್ಲಿ ಮನೆ ನಿರ್ಮಿಸದೇ ಸದರಿ ಸ್ಥಳಕ್ಕೆ ಹೊಂದಿಕೊಂಡಿರುವ ಸರ್ಕಾರಿ ಜಾಮೀನಿನಲ್ಲಿ ಕಾನೂನುಬಾಹಿರವಾಗಿ ಮನೆ ಕಟ್ಟಿರುತ್ತಾರೆಂದು ಸದರಿ ಕಟ್ಟಡಕ್ಕೆ ಮನೆ ನಂಬರ್ ನೀಡುವ ಬಗ್ಗೆ ದಿನಾಂಕ: 28–01–2014 ರಂದು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಂಡಿರುತ್ತಾರೆ. ಸದರಿ ಜಮೀನನ್ನು ಬಾಲಭವನ ನಿರ್ಮಾಣದ ಬಗ್ಗೆ ಕಾಯ್ದಿರಿಸಬೇಕೆಂದು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಗಿದ್ದು, ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಹಾಗೂ ಸರ್ಕಾರಿ ಜಮೀನನ್ನು ಬಾಲಭವನಕ್ಕೆ ಕಾಯ್ದಿರಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ತನಿಖೆಗೆ ಆದೇಶಿಸಲಾಗಿರುತ್ತದೆ.

ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ದಿನಾಂಕ: 28/01/2014 ರಂದು ಮೇಲೆಹೇಳಿದ ವಿವಾದಿತ ಕಟ್ಟಡಕ್ಕೆ ಕಟ್ಟಡ ನಂಬರ್ ನೀಡುವಂತೆ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ. ನಂತರ ಸದರಿ ಶ್ರೀಮತಿ ಸುಂದರಿಯವರಿಗೆ ನೋಟೀಸನ್ನು ನೀಡಿ ಅವರು ಕಟ್ಟುತ್ತಿರುವ ಮನೆಯ ಜಾಗಕ್ಕೆ ಭೂ ಪರಿವರ್ತನೆ ಆದೇಶ ಪಡೆಯಲಾಗಿದೆಯೇ ಎನ್ನುವ ಬಗ್ಗೆ ಉತ್ತರ ಕೋರಿದ್ದು, ಅದಕ್ಕೆ ಸದರಿಯವರು ನಿರ್ಮಾಣ ಮಾಡಿದ ಸ್ಥಳಕ್ಕೆ ಭೂ ಪರಿವರ್ತನಾ ಆದೇಶ ಪಡೆಯಲಾಗಿರುತ್ತದೆ ಎಂಬು ತಿಳಿಸಿ ಉತ್ತರ ನೀಡಿರುತ್ತಾರೆ. ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ, ತಾನು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ತೀರ್ಮಾನದಂತೆ ಕ್ರಮ ಕೈಗೊಂಡಿರುವುದಾಗಿ ತಿಳಿಸಿರುತ್ತಾರೆ

ಸದರಿ ಎದುರುದಾರರ ಆಕ್ಷೇಪಣೆಯ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಶ್ರೀಮತಿ ಸುಂದರಿಯವರು ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿರುತ್ತಾರೆ. ಈ ಬಗ್ಗೆ ತಾವು ತಮ್ಮ ತಕರಾರನ್ನು ಪಂಚಾಯತಿಗೆ ಸಲ್ಲಿಸಿದಾಗ, ಎದುರುದಾರರು ವಿವಾದಿತ ಮನೆ ಸ್ಥಳವನ್ನು ಸರ್ವೆ ಮೂಲಕ ಅಳತೆ ಮಾಡಿಸಿ ತಹಶೀಲ್ದಾರ್‌ರವರಿಂದ ಹಾಗೂ ಸರ್ವೆ ಇಲಾಖೆಯಿಂದ ವರದಿ ಪಡೆಯಬೇಕಾಗಿದ್ದು, ಆದರೆ, ಎದುರುದಾರರು ಕಾನೂನುಬಾಹಿರವಾಗಿ ಶ್ರೀಮತಿ ಸುಂದರಿ ಎಂ. ಬಂಗೇರ ರವರಿಗೆ ಅನುಕೂಲವಾಗುವಂತೆ ಕಾನೂನುಬಾಹಿರವಾಗಿ ಪರವಾನಗೆ ಹಾಗೂ ಡೋರ್ ನಂಬರ್ ಅನ್ನು ನೀಡಿರುತ್ತಾರೆ. ಎಂದು ತಿಳಿಸಿರುತ್ತಾರೆ

ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಉಡುಪಿಯ ಪೊಲೀಸ್ ಉಪಾಧೀಕ್ಷಕರಿಗೆ ವಹಿಸಿದ್ದು, ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯನ್ನು ಸಲ್ಲಿಸಿ, ಶ್ರೀಮತಿ ಸುಂದರಿ ಎಂ. ಬಂಗೇರ ರವರು ನಿರ್ಮಿಸಿದ ಮನೆಯು ಹೆಚ್ಚಿನ ಭಾಗ ಈದು ಗ್ರಾಮದ ಸರ್ವೆ ನಂ.202/3 ರಲ್ಲಿಯೇ ಉಳಿದ ಸ್ವಲ್ಪ ಭಾಗ ಶ್ರೀ ಶಂಕರ್ ನಾರಾಯಣ ಮಯ್ಯ ಇವರಿಗೆ ಸೇರಿದ ಪಟ್ಟಾ ಸರ್ವೆ ನಂ. 202/11 ರಲ್ಲಿ ಕಟ್ಟಿರುತ್ತಾರೆಂದು ತಹಶೀಲ್ದಾರ್, ಕಾರ್ಕಳ ರವರು ನಕ್ಷೆ ಸಮೇತ ವರದಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಹಾಗೂ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಡ ನಿರ್ಮಾಣ ಮಾಡಿರುವ ವಿಚಾರ ಈದು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀ ಧರ್ಮೇಂದ್ರ ಕುಮಾರ್ ರವರಿಗೆ ದಿ:07/09/2012 ರ ಸಾಮಾನ್ಯ ಸಭೆಯಲ್ಲಿಯೇ ನಿರ್ಣಯಕ್ಕೆ ಬಂದಿದ್ದರೂ ಕೂಡ, ಸದರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಕಾರ್ಕಳ ತಾಲ್ಲೂಕಿನ ತಹಶೀಲ್ದಾರ್‌ರವರಿಂದಾಗಲೀ, ಗ್ರಾಮ ಕರಣೀಕರಿಂದಾಗಲೀ ಸದರಿ ಜಾಗವು ಸರ್ಕಾರಿ ಜಾಗವೋ ಅಥವಾ ಪಟ್ಟಾ ಜಾಗವೋ ಎಂಬ ಬಗ್ಗೆ ದೃಢೀಕರಿಸಿಕೊಳ್ಳಲು ವರದಿಯನ್ನು ಪಡೆಯದೇ ದೂರುದಾರ ಗ್ರಾಮ ಪಂಚಾಯತಿ ಸದಸ್ಯರ ಆಕ್ಷೇಪಣೆ ನಡುವೆಯೂ ಶ್ರೀಮತಿ ಸುಂದರಿ ಎಂ. ಬಂಗೇರ ರವರ ಸೊಸೆ ಗ್ರಾಮ ಪಂಚಾಯಿತಿ ಸದಸ್ಯೆಯಾದ ಶ್ರೀಮತಿ ಲಾವಣ್ಯ ಇವರ ಒತ್ತಾಯದ ಮೇರೆಗೆ ಮನೆ ನಂಬರ್ 3/85 ಅನ್ನು ನೀಡಿರುವುದು ಸ್ಪಷ್ಟ ಪಟ್ಟಿರುತ್ತದೆಂದು ಆದ್ದರಿಂದ, ಎದುರುದಾರರು ಕರ್ತವ್ಯಲೋಪವೆಸಗಿರುವುದು ದೃಢಪಟ್ಟಿರುತ್ತದೆ ಎಂದು ತಿಳಿಸಿರುತ್ತಾರೆ

ದೂರಿನಂಶಗಳನ್ನು, ಎದುರುದಾರರ ಆಕ್ಷೇಪೆಯನ್ನು ತನಿಖಾಧಿಕಾರಿಯವರ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಯನ್ನು ಪರಿಶೀಲಿಸಿದಲ್ಲಿ ತಹಶೀಲ್ದಾರ್, ಕಾರ್ಕಳ ರವರು ದಿ:18/01/2016 ರಂದು ನೀಡಿರುವ ವರದಿಯ ಆಧಾರದ ಮೇಲೆ ಶ್ರೀಮತಿ ಸುಂದರಿ ಎಂ. ಬಂಗೇರ ರವರು ಇವರು ಮೇಲೆ ಹೇಳಿದ ವಿವಾದಿತ ಮನೆಯನ್ನು ಸರ್ವೆ ನಂ.202/3 ರ ಸರ್ಕಾರಿ ಜಾಗದಲ್ಲಿ ಹಾಗೂ ಸರ್ವೆ ನಂ. 202/11 ರ ಪಟ್ಟಾ ಸ್ಥಳದಲ್ಲಿ ಕಟ್ಟಿರುವುದು ದೃಢಪಡುತ್ತದೆ (ಸದರಿ ತಹಶೀಲ್ದಾರ್ ರವರ ವರದಿಯನ್ನು ಹಾಗೂ ಅದರೊಡನೆ ಅಡಕ ಮಾಡಿರುವ ಸರ್ವೆ ನಕಾಶೆಯನ್ನು ಹಾಜರುಪಡಿಸಲಾಗಿದೆ). ಗ್ರಾಮ ಪಂಚಾಯತಿ ವತಿಯಿಂದ ಶ್ರೀಮತಿ ಸುಂದರಿ ಯವರಿಗೆ ನೋಟೀಸ್ ಅನ್ನು ದಿ:07/09/2012 ರಂದು ನೀಡಿದ್ದು, ಅದರಲ್ಲಿ ವಿವಾದಿತ ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ಕಟ್ಟಿರುವ ಬಗ್ಗೆ ದೂರು ಬಂದಿದ್ದು, ಸಂಬಂಧಪಟ್ಟ ಇಲಾಖೆಯಿಂದ ಗಡಿ ಗುರುತಿನ ದೃಢೀಕರಣ ಬರುವವರೆಗೂ ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸತಕ್ಕದ್ದು, ತಪ್ಪದಲ್ಲಿ ಪರವಾನಗೆಯನ್ನು ರದ್ದುಗೊಳಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಸದರಿ ನೋಟೀಸ್ ಅನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಎದುರುದಾರರಾದ ಶ್ರೀ ಧರ್ಮೇಂದ್ರ ಬಿ.ಆರ್ ರವರೆ ನೀಡಿರುತ್ತಾರೆ. ನಂತರ ಗ್ರಾಮ ಸಭಾ ಪಂಚಾಯತಿಯ ನಿರ್ಣಯದಲ್ಲಿ ಶ್ರೀಮತಿ ಸುಂದರಿ ರವರಿಗೆ ಕಾಮಗಾರಿಯನ್ನು ಸ್ಥಗಿತಗೊಳಿಸಲು ನೋಟೀಸ್ ನೀಡಿ ವಿಷಯವನ್ನು ಮಾನ್ಯ ತಹಶೀಲ್ದಾರ್ ರವರ ಗಮನಕ್ಕೆ ತಂದು ಸದರಿ ಜಾಗವನ್ನು ಬಾಲಭವನಕ್ಕೆ ಕಾಯ್ದಿರಿಸುವಂತೆ ಕೋರಿ ಪತ್ರ ಬರೆಯಲು ಸೂಚಿಸಿರುವುದು ಕಂಡು ಬರುತ್ತದೆ (ಸದರಿ ನಿರ್ಣಯದ ಪ್ರತಿಯನ್ನು ಹಾಜರುಪಡಿಸಲಾಗಿದೆ). ತಹಶೀಲ್ದಾರ್‌ರವರಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರು ಪತ್ರ ಬರೆದು, ಸದರಿ ಸ್ಥಳವನ್ನು ಬಾಲಭವನಕ್ಕೆ ಕಾಯ್ದಿರಿಸುವಂತೆ ಕೋರಿರುತ್ತಾರೆ. (ಸದರಿ ಪತ್ರವನ್ನು ಹಾಜರುಪಡಿಸಲಾಗಿದೆ). ಇದಲ್ಲದೇ, ಶ್ರೀಮತಿ ಸುಂದರಿ ರವರು ತಾನು ಕಟ್ಟಡವನ್ನು ಸರ್ವೆ ನಂ.361 ರಲ್ಲಿ ಕಟ್ಟುವುದಾಗಿ ತಿಳಿಸಿ ಸರ್ವೆ ನಂ.202/3 (ಸರ್ಕಾರಿ ಜಾಗ) ಹಾಗೂ 202/11 (ಪಟ್ಟ ಜಾಗದಲ್ಲಿ) ಮನೆ ಕಟ್ಟುತ್ತಿರುವ ಬಗ್ಗೆ ದೂರುದಾರರಿಂದ ಆಕ್ಷೇಪಣೆ ಬಂದಿದ್ದರೂ ಸಹ, ಮೇಲೆ ತಿಳಿಸಿದಂಎ ಎದುರುದಾರರು ಸದರಿ ಶ್ರೀಮತಿ ಸುಂದರಿ ಇವರ ಕಟ್ಟಡ ರಚನೆಗೆ ಅವರಿಗೆ ನೀಡಲಾಗಿದ್ದ ನೋಟೀಸ್‌ನಲ್ಲಿ ತಿಳಿಸಿದಂತೆ ಮುಂದಿನ ಕ್ರಮವನ್ನು ಕೈಗೊಳ್ಳದೇ ಅಂದರೇ ಕಟ್ಟಡವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳದೇ ಸದರಿ ಶ್ರೀಮತಿ ಸುಂದರಿಯವರು ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ಕಟ್ಟುತ್ತಿದ್ದರೂ ಅವರ ಕಟ್ಟಡದ ರಚನೆಯನ್ನು ನಿಲ್ಲಿಸದೇ, ಅವರಿಗೆ ಕಟ್ಟಡವನ್ನು ಪೂರ್ಣಗೊಳಿಸಲು ಅನುಕೂಲ ಮಾಡಿಕೊಟ್ಟು, ಕಟ್ಟಡದ ನಂಬರ್ ಅನ್ನು ಸಹ ನೀಡಿ ಕರ್ತವ್ಯಲೋಪವೆಸಗಿರುವುದು ಸ್ಪಷ್ಟ ಪಡುತ್ತದೆ.

ಎದುರುದಾರರು ತಾನು ಪಂಚಾಯತಿ ನಿರ್ಣಯದಂತೆ ಕ್ರಮ ಜರುಗಿಸಿರುವುದಾಗಿ ತಿಳಿಸಿ ಪ್ರತಿ ರಕ್ಷಣೆಯನ್ನು ತೆಗೆದುಕೊಂಡಿರುತ್ತಾರೆ. ಆದರೆ, ಸದರಿ ಶ್ರೀಮತಿ ಸುಂದರಿಯವರು ಆಕ್ರಮವಾಗಿ ಕಟ್ಟಡ ರಚನೆ ಮಾಡುತ್ತಿರುವುದು ಕಂಡು ಬಂದಿದ್ದರೂ ಹಾಗೂ ಸದರಿ ಶ್ರೀಮತಿ ಸುಂದರಿಯವರು ಪರವಾಗಿ ಪಂಚಾಯಿತಿ

ನಿರ್ಣಯ ಕೈಗೊಂಡಿರುವುದು ಕಾನೂನುಬಾಹಿರವೆಂದು ತಿಳಿದಿದ್ದರೂ, ಎದುರುದಾರರು ಸದರಿ ನಿರ್ಣಯಗಳನ್ನು ತಾಲ್ಲೂಕು ಪಂಚಾಯತಿಗೆ ಕಳುಹಿಸಿ ಸದರಿ ನಿರ್ಣಯಗಳನ್ನು ರದ್ದುಪಡಿಸಲು ಕ್ರಮ ಜರುಗಿಸದೇ ಕರ್ತವ್ಯಲೋಪವೆಸಗಿರುವುದು ಹಾಗೂ ಅವರು ಶ್ರೀಮತಿ ಸುಂದರಿಯವರಿಗೆ ಸಹಕರಿಸಲು ಇದ್ದ ಮನೋಭಾವವನ್ನು ದೃಢಪಡುತ್ತದೆ ಎಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ

ಈ ಹಿನ್ನೆಲೆಯಲ್ಲಿ ಎದುರುದಾರರು ಸಾರ್ವಜನಿಕ / ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966, ನಿಯಮ 3(1)(i)(ii) ಮತ್ತು (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಇಲಾಖಾ ವಿಚಾರಣೆ ಮಾಡಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/328/ಗ್ರಾಪಂಕಾ/2017 ಬೆಂಗಳೂರು, ದಿನಾಂಕ:18-05-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಿ.ಆರ್. ಧರ್ಮೇಂದ್ರ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಈದು ಗ್ರಾ.ಪಂ., ಕಾರ್ಕಳ ತಾಲ್ಲೂಕು, ಉಡುಪಿಜಿಲ್ಲೆ , ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಇದರೊಂದಿಗೆ ಈ ಪ್ರಕರಣದ ಮೂಲ ದಾಖಲಾತಿಯನ್ನು ಪುಟ ಸಂಖ್ಯೆ 01 ರಿಂದ 58 ರವರೆಗೆ ಲಗತ್ತಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.
6. ಶ್ರೀ ಬಿ.ಆರ್. ಧರ್ಮೇಂದ್ರ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಈದು ಗ್ರಾ.ಪಂ., ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಣಕ ಕೋಶ.